**ದಿನಾಂಕ 30.8.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.**

**ಮುಂದುವರಿದು ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ. ವೈ.ಆರ್.ಕೆ ವಕೀಲರಿಂದಃ**

9. ನನ್ನ ಕಿರುಕುಳವನ್ನು ತಾಳಲಾರದೇ ಅರ್ಜಿದಾರರು ಮತ್ತು ಮಕ್ಕಳು ನನ್ನ ಮನೆಯಿಂದ ಬಂದಿದ್ದಾರೆ ಎಂದರೆ ಸರಿಯಲ್ಲ, ಆಕೆಯ ದೊಡ್ಡಪ್ಪನ ಮಗನ ಮದುವೆಗೆ ದಿಃ 17.11.2019 ರಂದು ನಾನು ಮತ್ತು ಅರ್ಜಿದಾರರು ಒಟ್ಟಿಗೆ ಬಂದಿದ್ದೇವೆ ಎಂದು ಹೇಳುತ್ತಾರೆ. ಈ ಬಗ್ಗೆ ಯಾವುದಾದರೂ ದಾಖಲಾತಿ ಇದೆಯಾ ಎಂದರೆ ಸಾಕ್ಷಿ ವಕೀಲರ ಹತ್ತಿರ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಆಕ್ಷೇಪ ಇದೆಯಾ ಎಂದರೆ ಇಲ್ಲ. ಬಾಳೆಹೊನ್ನೂರು ಪೊಲೀಸ್ ಠಾಣೆಗೆ ಯಾಕೆ ದೂರು ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಅರ್ಜಿದಾರರು ಹೇಳದೇ ಕೇಳದೇ ಬಂದಿದ್ದು, ಅವರ ತಂದೆ ತಾಯಿಗೆ ದೂರವಾಣಿ ಕರೆ ಮಾಡಿ ಕೇಳಿದಾಗ ಇಲ್ಲ ಎಂದು ತಿಳಿಸಿದ್ದರು, ಆದ ಕಾರಣ ಗಾಬರಿಗೊಂಡು ದೂರು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಈ ಮೇಲೆ ಹೇಳಿದ ರೀತಿಯಲ್ಲಿ ನನ್ನ ಪ್ರಮಾಣ ಪತ್ರದಲ್ಲಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ದಿಃ 8.8.2015 ರಂದು ನೀಡಿದ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಗೊತ್ತಿಲ್ಲ. ಈ ಬಗ್ಗೆ ವಕೀಲರಲ್ಲಿ ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ಹೌದು, ಕೊಡುತ್ತೇವೆ ಎಂದು ಹೇಳಿದ್ದರು. ಯಾಕೆ ಕೊಟ್ಟಿಲ್ಲ ಎಂದು ಕೇಳಿದ್ದೀರಾ ಎಂದರೆ ಇಲ್ಲ.

10. ಮಕ್ಕಳನ್ನು ನೋಡಿಕೊಳ್ಳಲು ತಯಾರಿದ್ದೀರಿ ಎಂದು ತಿಳಿಸಿದ್ದು ಆ ಬಗ್ಗೆ ನ್ಯಾಯಾಲಯದಲ್ಲಿ ಮಕ್ಕಳನ್ನು ನೋಡಿಕೊಳ್ಳಲು ಸ್ವಾದೀನಕ್ಕೆ ಕೊಡಿ ಎಂದು ಅರ್ಜಿ ಸಲ್ಲಿಸಿದ್ದೀರಾ ಎಂದರೆ ಇಲ್ಲ, ಆದರೆ ನ್ಯಾಯಾಲಯದಲ್ಲಿ ಸಾಕಾಷ್ಟು ಬಾರಿ ಹೇಳಿದ್ದೇವೆ. ಆದರೆ ಅರ್ಜಿದಾರರು ಅದಾಲತ್‌ನಲ್ಲಿ ಕೊಡುವುದಿಲ್ಲ ಎಂದು ತಿಳಿಸಿರುತ್ತಾರೆ. ಅರ್ಜಿದಾರರು ಮಂಗಳೂರಿನಲ್ಲಿ ಎಲ್ಲಿ ಕೆಲಸ ಮಾಡುತ್ತಿದ್ದಾರೆ ಗೊತ್ತಾ ಎಂದರೆ ಸಾಕ್ಷಿ 15 ದಿನಗಳಿಗೊಮ್ಮೆ ಎಲ್ಲಿ ಕೆಲಸ ಸಿಗುತ್ತದೆ ಅಲ್ಲಿಗೆ ಹೋಗುತ್ತಾರೆ, ಅವರಿಗೆ ಖಾಯಂ ಕೆಲಸ ಒಂದು ಕಡೆ ಇರುವುದಿಲ್ಲ. ದೀಪಕ್ ಎಂದರೆ ಯಾರು ಎಂದರೆ ನನಗೆ ಗೊತ್ತಿಲ್ಲ. ಆದರೆ ಅರ್ಜಿದಾರರು ಫೇಸ್‌ಬುಕ್‌ನಲ್ಲಿ ಹಾಕಿಕೊಂಡಿದ್ದಾರೆ. ಅದು ನಿಮಗೆ ಹೇಗೆ ಗೊತ್ತಾಗಿದೆ ಎಂದರೆ ನಾನು ಫೇಸ್‌ಬುಕ್‌ನ್ನು ನೋಡಿದ್ದೇನೆ ಎಂದು ಹೇಳುತ್ತಾರೆ. ನಾನು ಮತ್ತು ಅರ್ಜಿದಾರರು ಜಾತಿ ಸಂಪ್ರದಾಯದ ಪ್ರಕಾರ ಗುರುಹಿರಿಯರ ಸಮಕ್ಷಮದಲ್ಲಿ ಮದುವೆಯಾಗಿದ್ದೇವೆ ಎಂದರೆ ಸರಿ. ನಿಮಗೆ ದಿನಕ್ಕೆ ರೂ. 150/- ಖರ್ಚು ಇದೆ ಎಂದು ಹೇಳಿದ್ದು, ಅರ್ಜಿದಾರರು ಮತ್ತು ಮಕ್ಕಳಿಗೆ ಖರ್ಚಿಗೆ ಹಣ ಬೇಕು ಎಂದರೆ ಹೌದು. ಅರ್ಜಿದಾರರು ಮತ್ತು ಮಕ್ಕಳು ಹೆಣ್ಣು ಆದ ಕಾರಣ ಅವರಿಗೆ ಖರ್ಚು ಬೇಕಾಗುತ್ತದೆ ಎಂದರೆ ಹೌದು. ಅರ್ಜಿದಾರರು ಮತ್ತು ಮಕ್ಕಳಿಗೆ ತಿಂಗಳಿಗೆ ಎಷ್ಟು ಕೊಡಲು ತಯಾರಿದ್ದಿರಿ ಎಂದರೆ ಸಾಕ್ಷಿ

ನನ್ನೊಟ್ಟಿಗೆ ಬಂದರೆ ಅವರನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಹೇಳುತ್ತಾರೆ. ಅರ್ಜಿದಾರರಿಗೆ ಕೊಡಬೇಕಾದ ಜೀವನಾಂಶವನ್ನು ತಪ್ಪಿಸಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಂಡತಿ ಬರದೇ ಇದ್ದ ಕಾರಣ ಹೆಂಡತಿ ಬೇಕು ಎಂದು ಸಂಬಂಧಪಟ್ಟ ನ್ಯಾಯಾಲಯಕ್ಕೆ ಯಾವ ಕಾರಣಕ್ಕೆ ಅರ್ಜಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಸಿ.ಡಿ.ಪಿ.ಒ ಕಚೇರಿಯಲ್ಲಿ ನನ್ನ ಹೆಂಡತಿ ಬೇಕು ಎಂದು ಕೇಳಿದ್ದೆ, ಅದರಲ್ಲಿ ತೀರ್ಮಾನ ಆಗುತ್ತದೆ ಎಂದು ಅಂದುಕೊಂಡಿದ್ದೆ ಎಂದು ಹೇಳುತ್ತಾರೆ. ಇವತ್ತಿಗಾದರೂ ನೀವು ಹೆಂಡತಿ ಮತ್ತು ಮಕ್ಕಳು ಬೇಕು ಎಂದು ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಅದು ನಮಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ನಿಮ್ಮ ವಕೀಲರ ಮೂಲಕ ತಿಳಿದುಕೊಂಡು ಅರ್ಜಿ ಹಾಕಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಮಿಡಿಯೇಷನ್ ನಲ್ಲಿ ಸಾಕಾಷ್ಟು ಬಾರಿ ಕೇಳಿದ್ದೇನೆ ಎಂದು ಹೇಳುತ್ತಾರೆ. ಆ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಮಿಡಿಯೇಷನ್ ಆದಾಗ ಒಂದು ತಿಂಗಳು ಬಂದು ನನ್ನ ಜೊತೆ ಇದ್ದರು, ಆಗ ಮಕ್ಕಳನ್ನು ಶಾಲೆಗೆ ಸೇರಿಸಿದ್ದೆ ಎಂದು ಹೇಳುತ್ತಾರೆ. ಯಾವ ಶಾಲೆಗೆ ಎಂದರೆ ನಿರ್ಮಲ ಕಾನ್ವೆಂಟ್‌ಗೆ ಸೇರಿದ್ದೆ. ಆ ಬಗ್ಗೆ ದಾಖಲೆ ಇದೆಯಾ ಎಂದರೆ ಇಲ್ಲ, ಟಿ.ಸಿಯನ್ನು ತೆಗೆದುಕೊಂಡು ಹೋಗಿರುತ್ತಾರೆ. ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾನೂನು ಪ್ರಕಾರ ಅರ್ಜಿದಾರರನ್ನು ಮದುವೆಯಾಗಿ ಮಕ್ಕಳನ್ನು ಮಾಡಿಕೊಂಡು ಈಗ ಅವರಿಗೆ ಮೋಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

11. ಮದುವೆ ಸಮಯದಲ್ಲಿ ಅರ್ಜಿದಾರರ ತಂದೆ ತಾಯಿ ನನಗೆ 10 ಗ್ರಾಮ್ ಚಿನ್ನ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅಲ್ಲದೆ ಪ್ರತ್ಯೇಕವಾಗಿ ವಾಸ ಮಾಡಲು ಪಾತ್ರೆ ಇತ್ಯಾದಿಗಳನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರಕರಣ ದಾಖಲಾದ ನಂತರ ನ್ಯಾಯಾಲಯದಲ್ಲಿ ಮತ್ತು ಮಿಡಿಯೇಷನ್ ಮುಂದೆ 10 ಗ್ರಾಮ್ ಚಿನ್ನ ಕೊಡುತ್ತೇನೆ ಎಂದು ನಾನು ಒಪ್ಪಿದ್ದೆ ಎಂದರೆ ಸರಿಯಲ್ಲ. ಅರ್ಜಿದಾರರು ಮತ್ತು ಮಕ್ಕಳಿಗೆ ಪ್ರತಿದಿನ ತಲಾ ರೂ. 500 ಗಳನ್ನು ಕೊಡುವುದನ್ನು ತಪ್ಪಿಸಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇರುವುದಿಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಗಳು ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)